ವಾರದ ಪತ್ರ

## ಪಾರು ಆಗಲಿ ಡಾ. ಪಾರ್ವತಿ

ಝೀ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ 'ಅಣ್ಣಯ್ಯ' ಧಾರಾವಾಹಿಯ ನಾಯಕಿ ಪಾರು ವೈದ್ಯಕೀಯ ಪದವೀಧರೆ. ಮದುವೆಯಾಗಿ ಗಂಡನ ಮನೆಗೆ ಸೇರಿದ ಬಳಿಕ ಆಕೆ ತಾನು ಓದಿದ್ದ ಪದವಿಯನ್ನೇ ಗಂಟುಮೂಟೆ ಕಟ್ಟಿ ಮೂಲೆಗಿಟ್ಟಿದ್ದಾಳೆ. ಕುಟುಂಬ, ಹಳ್ಳಿಯ ಸಮಸ್ಯೆಗಳತ್ತ ಗಮನಹರಿಸುವ ನಾಯಕಿ ತನ್ನ ವೃತ್ತಿ ಬದುಕಿನತ್ತಲೂ ಗಮನಹರಿಸಬೇಕಲ್ಲವೇ? ವೈದ್ಯಕೀಯ ಪದವಿ ಪಡೆದರೂ ಹೆಣ್ಣು ಮನೆಯಲ್ಲಿ ಗೃಹಿಣಿ ಪಟ್ಟ ಅಲಂಕರಿಸಬೇಕು ಎಂಬ ತಪ್ಪು ಸಂದೇಶ ವೀಕ್ಷಕರಿಗೆ ರವಾನೆಯಾಗುತ್ತದೆ. ನಿರ್ದೇಶಕರು ಪಾರು ಅವರನ್ನು ಡಾ. ಪಾರ್ವತಿಯನ್ನಾಗಿ ಪರಿವರ್ತಿಸಿ, ಗ್ರಾಮೀಣ ಭಾಗದ ವೈದ್ಯಕೀಯ ಸಮಸ್ಯೆಗಳತ್ತಲೂ ಧಾರಾವಾಹಿಯಲ್ಲಿ ತೋರಿಸಿದರೆ ಇತರ ಧಾರಾವಾಹಿಗಳಿಗಿಂತ 'ಅಣ್ಣಯ್ಯ' ಭಿನ್ನವಾಗಿ ವೀಕ್ಷಕರ ಮನದಲ್ಲಿ ನೆಲೆ ನಿಲ್ಲಲು ಸಾಧ್ಯ.

—ಅನಸೂಯಮ್ಮ, ಹಿರಿಯೂರು

## ಒಳ್ಳೆಯ ಅತ್ತೆ-ಸೊಸೆ!

ಅತ್ತೆ—ಸೊಸೆ ಅಂದರೆ ಹಾವು—ಮುಂಗುಸಿ ಥರ ಕಿತ್ತಾಡುತ್ತಿರುವಂತೆಯೋ ಅಥವಾ ಒಬ್ಬರನ್ನು ಕಂಡರೆ ಮತ್ತೊಬ್ಬರಿಗೆ ಆಗದಂತೆಯೋ ಮಾಧ್ಯಮಗಳು ಹೆಚ್ಚು ಚಿತ್ರಿಸುತ್ತವೆ. ಆದರೆ, ಝೀ ಕನ್ನಡದ 'ಲಕ್ಷ್ಮೀ ನಿವಾಸ' ಧಾರಾವಾಹಿ, ಅತ್ತೆ—ಸೊಸೆಯರ ಸಂಬಂಧ ತಾಯಿ—ಮಗಳಂತೆ ಇರಬಹುದು ಎಂಬುದನ್ನು ಮನಗಾಣಿಸುತ್ತಿದೆ. ಅತ್ತೆ ಲಕ್ಷ್ಮಿ ಹಾಗೂ ಸೊಸೆ ವೀಣಾ ನಡುವಿನ ಬಾಂಧವ್ಯ ನೋಡುಗರಿಗೆ ಖುಷಿ ಕೊಡುತ್ತದೆ. ಸೌಮ್ಯ ಸ್ವಭಾವದ ಅತ್ತೆ, ವಾಸ್ತವವಾದಿ ಸೊಸೆಯ ನಡುವಿನ ಸಂಬಂಧ ವಿಭಿನ್ನವಾಗಿದೆ. ಮನೆಯ ಕೆಲಸ, ವಿದ್ಯಮಾನಗಳ ವಿಚಾರದಲ್ಲಿ ಅತ್ತೆ—ಸೊಸೆ ಇಬ್ಬರೂ ಅರ್ಥ ಮಾಡಿಕೊಳ್ಳುವ ಪರಿಭಾಷೆ. ಅಪ್ಪ—ಅಮ್ಮನನ್ನು ಗೌರವಿಸದ ಗಂಡನ ತಪ್ಪನ್ನು ಮುಲಾಜಿಲ್ಲದೇ ಹೇಳುವ ವೀಣಾ ಪಾತ್ರಧಾರಿ ಇಂಥ ಸೊಸೆಯೂ ಇರುತ್ತಾಳೆ ಎಂಬುದನ್ನು ನಿರೂಪಿಸಿದೆ. ಅತ್ತೆ—ಸೊಸೆ ಅಂದರೆ ಪರಸ್ಪರ ಶತ್ರುಗಳಲ್ಲ, ಇಬ್ಬರೂ ಒಳ್ಳೆಯ ಗೆಳತಿಯರಂತೆ ಇರಬಹುದು ಎಂಬುದನ್ನು 'ಲಕ್ಷ್ಮೀ ನಿವಾಸ' ನಿರೂಪಿಸಿದೆ. ನಿರ್ದೇಶಕರಿಗೆ ಹಾಗೂ ಪಾತ್ರಧಾರಿಗಳಿಗೆ ಅಭಿನಂದನೆಗಳು.

—ಅಶ್ವಿನಿ ನಾಯಕ್, ದಾವಣಗೆರೆ

## ಮುಗಿಯದ ಯುದ್ಧ

ಪಾಕಿಸ್ತಾನ ಮತ್ತು ಭಾರತ ನಡುವಿನ ಸೇನಾ ಸಂಘರ್ಷವನ್ನು ನಮ್ಮ ಸುದ್ದಿ ವಾಹಿನಿಗಳು ವಾಸ್ತವಕ್ಕೆ ಮಸಾಲೆ ಸೇರಿಸಿ ದಿನ ಪೂರ್ತಿ ವೀಕ್ಷಕರ ಮೇಲೆ ದಾಳಿಯನ್ನು ಮುಂದುವರಿಸುತ್ತಿವೆ. ಇಂದಿಗೂ ಬೇರೆ ಸಂದರ್ಭದಲ್ಲಿ ಜರುಗಿದ ದೃಶ್ಯಗಳನ್ನು ಇಟ್ಟುಕೊಂಡು ಅತಿರೇಕವನ್ನು ಸೃಷ್ಟಿಸುತ್ತಿವೆ. ತಮಾಷೆ ಎಂದರೆ, ಕೆಲವು ಸುದ್ದಿ ವಾಹಿನಿಗಳು ಉಕ್ರೇನ್ ಯುದ್ಧದ ತುಣುಕುಗಳನ್ನೂ ಸೇರಿಸಿವೆ. ಮಾಧ್ಯಮದ ಸಾಮಾಜಿಕ ಜವಾಬ್ದಾರಿ ಅಂದರೆ ಇದೇ ಎಂದು ಯುವಪೀಳಿಗೆ ಅಪಾರ್ಥ ಮಾಡಿಕೊಳ್ಳುವ ಸಂಭವವೂ ಇದೆ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಸಿದ್ದಿಗಳ ಸಂಸ್ಕೃತಿ ಪರಿಚಯ

ಝೀ ಕನ್ನಡ ವಾಹಿನಿಯ 'ಭರ್ಜರಿ ಬ್ಯಾಚುಲರ್ಸ್' ರಿಯಾಲಿಟಿ ಶೋದಲ್ಲಿ ಸಿದ್ದಿ ಜನಾಂಗದವರನ್ನು ಪರಿಚಯಿಸಲಾಯಿತು. ಸ್ಪರ್ಧಿಗಳು ಸಿದ್ದಿ ಸಮುದಾಯದ ಜೊತೆ ಹೊಂದಿಕೊಂಡು ಒಳ್ಳೆಯ ಕಾರ್ಯಕ್ರಮ ನೀಡಿದರು. ಇಂಥ ಪ್ರಯೋಗಗಳು ಹೆಚ್ಚಲಿ.

—ಕಮಲಾದೇವಿ ರಾಜಶೇಖರ ಹಳ್ಳೂರ್

## ಕಿರಿಕಿರಿ ಪಾತ್ರ ತಪ್ಪಲಿ

ಝೀ ಕನ್ನಡದ 'ಶ್ರಾವಣಿ ಸುಬ್ರಮಣ್ಯ' ಧಾರಾವಾಹಿಯಲ್ಲಿ ಸುಂದರ—ಕಾಂತಮ್ಮ ಜೋಡಿಯ ಉಪಟಳ ಜಾಸ್ತಿಯಾಗುತ್ತಿದೆ. ಈ ದಂಪತಿಗೆ ಮಗು ಕೂಡ ಇದೆ. ಅಂದಹಾಗೆ, ಈಗ ಕೆಲಸ ಹುಡುಕುತ್ತಿರುವ ಸುಂದರನಿಗೆ ಮದುವೆ ಆಗುವ ಮುನ್ನ ಕೆಲಸವಿರಲಿಲ್ಲವೆ? ಪ್ರತಿ ಸಂಚಿಕೆಯಲ್ಲಿ ಅವರದ್ದೇ ಅರ್ಧ ಸಮಯ ಕಳೆದುಹೋಗುತ್ತದೆ. ಆ ಎರಡು ಪಾತ್ರಗಳು ಇಲ್ಲದೇ ಇದ್ದರೂ ಕಥೆಗೆ ತೊಂದರೆ ಆಗಲಾರದು.

—ಅರುಣ್ ಕೆ.ಎನ್., ಬೆಂಗಳೂರು



## ಸರಿಗಮಪದಲ್ಲಿ ಕುಟುಂಬ ಸಂಭ್ರಮ

ಝೀ ಕನ್ನಡದ 'ಸರಿಗಮಪ' ಕಾರ್ಯಕ್ರಮದ 'ಕುಟುಂಬದ ಸುತ್ತು' ನಮ್ಮನ್ನು ಅದ್ಭುತ ಲೋಕಕ್ಕೆ ಕರೆದೊಯ್ದಿತು. ಗಾಯಕರು ತಮ್ಮ ಕುಟುಂಬದವರೊಂದಿಗೆ ಸುಮಧುರ ಗೀತೆಗಳನ್ನು ಪ್ರಸ್ತುತಪಡಿಸಿದರು. ಬಸವಣ್ಣನವರ ವಚನವನ್ನು ಶಿವಾನಿ ವಾದ್ಯ ಪರಿಕರದೊಂದಿಗೆ ಸುಶ್ರಾವ್ಯವಾಗಿ ಹಾಡಿದರು. ರಾಜೇಶ್ ಕೃಷ್ಣನ್ ತಮ್ಮ ತಾಯಿ ಜೊತೆ ಭಕ್ತಿಪೂರ್ವಕವಾಗಿ ಹಾಡಿದ್ದು ಮರೆಯಲಾಗದ ಅನುಭವ. 97 ವರ್ಷದ ಹಿರಿಯ ಜೀವದ ಲವಲವಿಕೆಯ ಮಾತುಕತೆ ಖುಷಿಕೊಟ್ಟಿತು.

—ಭಾರತೀ ಗಂಗಾಧರ್, ಬೆಂಗಳೂರು

ನಮ್ಮ ಮೆಚ್ಚಿನ ಝೀ ಕನ್ನಡ 'ಸರಿಗಮಪ' ಸ್ಪರ್ಧೆಯಲ್ಲಿ ಒಳ್ಳೆಯ ಪ್ರತಿಭಾವಂತ ಗಾಯಕರಿದ್ದಾರೆ. ಆದರೆ, ಒಳ್ಳೆಯ ಹಾಡುಗಳ ಆಯ್ಕೆಯನ್ನು ಕೆಲವೇ ಸ್ಪರ್ಧಿಗಳು ಮಾಡಿಕೊಳ್ಳುತ್ತಿದ್ದಾರೆ ಎಂದು ಅನಿಸುತ್ತಿದೆ. ಕೆಲವು ಗಾಯಕರಿಗೆ ಉತ್ತಮವಾದ, ಮತ್ತೆ ಕೆಲವರಿಗೆ ಸಾಧಾರಣ ಗೀತೆಗಳನ್ನು ಕೊಡುವುದು ಸರಿಯಲ್ಲ.

—ಎಸ್. ರುಕ್ಮಿಣಿ, ಬೆಂಗಳೂರು

ಝೀ ಕನ್ನಡದ 'ಸರಿಗಮಪ' ಫ್ಯಾಮಿಲಿ ರೌಂಡ್ ಕುಟುಂಬ ಸದಸ್ಯರಿಂದ ಕಳೆಗಟ್ಟಿತ್ತು. ಶಿವಾನಿ ಹಾಗೂ ಅವರ ತಂದೆ ಪ್ರಸ್ತುತಪಡಿಸಿದ 'ಉಳ್ಳವರು ಶಿವಾಲಯ ಮಾಡುವರು' ವಚನ ಗಾಯನ ಮತ್ತು ವಾದ್ಯಗೋಷ್ಠಿ ಅದ್ಭುತವಾಗಿತ್ತು. ವಿಜಯ ಪ್ರಕಾಶ್ ಹಾಗೂ ಶಿವಾನಿಯ ತಂದೆ ಜುಗಲ್ ಬಂದಿ ಮನಸೂರೆಗೊಂಡಿತು. ಆರಾಧ್ಯ ಹಾಗೂ ಅವರ ತಂದೆ ಶ್ರೀಕಾಂತ್ ಅವರ 'ಕಣಕಣದಿ ಶಾರದೆ' ಹಾಡು ಮನೋಜ್ಞವಾಗಿತ್ತು. ದ್ಯಾಮೇಶ್ ಹಾಡಿದ 'ಅಮ್ಮ ನನ್ನೀ ಜನುಮ' ಹಾಡು ಕಣ್ಣಂಚಿನಲ್ಲಿ ಕಂಬನಿ ತರಿಸಿತು.

—ಅನ್ನಪೂರ್ಣಮ್ಮ, ಬೆಂಗಳೂರು ಕಪಾಲ ಮೋಕ್ಷ

## ಕಪಾಳಮೋಕ್ಷ

ಕಪಾಳಕ್ಕೆ ಹೊಡೆಸಿಕೊಂಡರೆ ಮೋಕ್ಷ ಸಿಗಬಹುದು ಎಂಬ ನಂಬಿಕೆ ಧಾರಾವಾಹಿ ನಿರ್ದೇಶಕರಲ್ಲಿ ಇರಬಹುದು. ಬಹುತೇಕ ಕಥೆಗಳಲ್ಲಿಯೂ ಕಪಾಳಮೋಕ್ಷ ಮಾಡಿಸುತ್ತಿದ್ದಾರೆ. ಕಲರ್ಸ್‌ನ 'ರಾಮಾಚಾರಿ'ಯಲ್ಲೂ ಈಗ ಶುರುವಾಗಿದೆ. ಚಾರು ಸೀತಾಲಕ್ಷ್ಮಿಗೆ ಪಟ್ ಪಟ್ ಅಂತ ಹೊಡಿತಾಳೆ. ಅಂತೂ ಈ ಕಪಾಳಮೋಕ್ಷ ನಮ್ಮ ಗಮನಸೆಳೆಯುತ್ತಿದೆ.

—ಮನೋಜ್ ಕುಮಾರ್ ಕೆ., ಬೆಂಗಳೂರು